ಅಸಲು ದಾವಾ ನಂ.84/2024
ಡಿ ಡಬ್ಲ್ಯು-2

ದಿನಾಂಕಃ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ.**

ನನ್ನ ಅಜ್ಜನ ತಮ್ಮ ಬಸಲಿಂಗಪ್ಪ ಇವರಿಗೆ 41/1 ಅ ಹೊಸ ಸರ್ವೇ ನಂ.41/1 ಜಮೀನು ಬಂದಿರುತ್ತದೆ ಎಂದರೆ ಸರಿ. ಇದೇ ಸರ್ವೇ ನಂಬರ ಪೈಕಿ 41/1 ಅ ದಲ್ಲಿ ನಮ್ಮ ಅಜ್ಜನಿಗೆ 04 ಎಕರೆ 31 ಗುಂಟೆ ಜಮೀನು ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಅದು ಖರೀದಿ ಹಿಡಿದಿದ್ದರಿಂದ ಬಂದಿತ್ತು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಸುಮಾರು 35 ವರ್ಷಗಳ ಹಿಂದೆ ನನ್ನ ತಾಯಿಯ ತಂದೆ ಖರೀದಿ ಹಿಡಿದಿದ್ದರು. ಸದರಿ ಖರೀದಿ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಹಾಗೇ ಹಾಜರುಪಡಿಸಲು ತೊಂದರೆ ಏನು ಇತ್ತು ಎಂದರೆ ಸಾಕ್ಷಿ ಅದು ಸುಟ್ಟು ಹೋಗಿರುವುದಾಗಿ ನುಡಿಯುತ್ತಾರೆ. ತಹಶೀಲ್ದಾರ ಕಚೇರಿಯ ಕಾಗದ ಪತ್ರಗಳು ಮಾತ್ರ ಸುಟ್ಟಿದ್ದು, ಸಬ್ ರಜಿಸ್ಟರ್ ಕಚೇರಿಯ ಕಾಗದ ಪತ್ರಗಳು ಸುಟ್ಟಿಲ್ಲ ಎಂದರೆ ಸರಿಯಲ್ಲ. ಸಬ್ ರಜಿಸ್ಟರ್ ಕಚೇರಿಗೆ ಖರೀದಿ ಪತ್ರದ ನಕಲು ಬೇಡಿ ಅರ್ಜಿ ಸಲ್ಲಿಸಿಲ್ಲ. ಬಸಲಿಂಗಪ್ಪ ಮತ್ತು ಬಸವಣ್ಣೆಪ್ಪ ಅಣ್ಣ-ತಮ್ಮಂದಿರು ಅವರಿಗೆ ಸರ್ವೇ ನಂ.41/1 ಅ ದಲ್ಲಿ ಅರ್ಧ ಅರ್ಧ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.41 ಕ್ಕೆ ಸಂಬಂಧಿಸಿದಂತೆ ಎಲ್ಲಾ ಜಮೀನುಗಳು ಕಳ್ಳಿಮನಿ ಮನೆತನಕ್ಕೆ ಸಂಬಂಧಿಸಿದವು, ಅವು ದೊಡ್ಡಗೌಡ್ರ ಮನೆತನಕ್ಕೆ ಸಂಬಂಧ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆಯ ತಾಯಿಯ ಹೆಸರು ಯಲ್ಲಮ್ಮ ಇರುತ್ತದೆ. ನನ್ನ ತಂದೆ ಜನಿಸಿದ 3 ವರ್ಷಗಳ ನಂತರ ಯಲ್ಲಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಂತರ ನನ್ನ ಅಜ್ಜ ಬಸವಣ್ಣೆಪ್ಪ ಇವರು ನನ್ನ ತಂದೆಯನ್ನು ಜೋಪಾನ ಮಾಡಲು ಬಸವ್ವ ಇವರನ್ನು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ನನ್ನ ಅಜ್ಜನ 2 ನೇ ಹೆಂಡತಿ ಬಸವ್ವ ಇವರು ಜೋಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಸವ್ವ ಇವರಿಗೆ ನನ್ನ ಅಜ್ಜನಿಂದ 3 ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನಂ.1, 2 ಹಾಗೂ ಮೃತ ನೀಲವ್ವ ಇವರು ಬಸವ್ವ ಇವರ ಮಕ್ಕಳು ಎಂದರೆ ಸರಿಯಲ್ಲ. ಅವರು ನನ್ನ ಅಜ್ಜನ ಮಕ್ಕಳು ಎಂದು ಗೊತ್ತಿದ್ದರೂ ನಾನು ಅವರು ಮಕ್ಕಳು ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಇವರು ವಾದಿ ನಂ.1 ಮತ್ತು 2, ಮೃತ ನೀಲವ್ವ ಇವರು ನನ್ನ ಅಜ್ಜನ ಮಕ್ಕಳು ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ

ಸುಳ್ಳು. ಅದೇ ರೀತಿ ನನ್ನ ಅಜ್ಜನ ತಮ್ಮ ಬಸಲಿಂಗಪ್ಪ ಸಹ ಅವರು ಮಕ್ಕಳು ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸುಳ್ಳು. ಬಸವಣ್ಣೆಪ್ಪ ಬಸವ್ವ ಇವರ ತವರು ಮನೆಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸುಳ್ಳು. ಬಸವ್ವ ಇವರು ದಿನಾಂಕ 30-03-1980 ರಂದು ವರ್ದಿ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸುಳ್ಳು. ನನ್ನ ಅಜ್ಜ ಬಸವಣ್ಣೆಪ್ಪ ಬಹಳ ವರ್ಷಗಳವರೆಗೆ ವರ್ದಿ ಗ್ರಾಮದಲ್ಲಿಯೇ ನೆಲಸಿದ್ದರು ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ನೀಡಬೇಕಾಗುತ್ತದೆ ಎಂದು ನಾನು ಸುಳ್ಳು ತಕರಾರು ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರ ತಂದೆ ಯಾರು ಎಂದು ಪತ್ತೆ ಹಚ್ಚುವ ಕೆಲಸ ಮಾಡಿಲ್ಲ. ಈ ದಾವೆ ಸಲ್ಲಿಸಿದ ನಂತರ ವಾದಿಯರ ಮೇಲೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ನನ್ನ ತಂದೆ ವಾದಿ ನಂ.1 ಮತ್ತು 2 ಹಾಗೂ ಮೃತ ನೀಲವ್ವ ಇವರನ್ನು ತನ್ನ ಮಕ್ಕಳು ಎಂದು ಒಪ್ಪಿಕೊಂಡಿದ್ದರೂ ನಾನು ಒಪ್ಪಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಗೆ ಗೊತ್ತಾಗದಂತೆ ಪಹಣಿಗಳಲ್ಲಿ ನಮ್ಮ ಹೆಸರು ಹಚ್ಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹಾಗೇ ಹೆಸರು ಹಚ್ಚುವಾಗ ನಮ್ಮ ಅಜ್ಜನ ವಾರಸು ಪ್ರಮಾಣ ಪತ್ರ ಪಡೆದುಕೊಂಡಿರುವುದಿಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ. 1, 6 ಮತ್ತು 7 ರವರ ಪರ ಶ್ರೀ. ವಿ ಎಸ್ ಕೆ ವಕೀಲರಿಂದ.**

ಪ್ರತಿವಾದಿ ನಂ.1, 6 ಮತ್ತು 7 ರವರನ್ನು ಕೂಗಿಸಲಾಯಿತು, ಹಾಜರು ಇರುವುದಿಲ್ಲ. ಯಾವುದೇ ಪ್ರತಿನಿಧಿತ್ವ ಇಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).